**OS-25/2019 P.W.1**

ದಿನಾಂಕ 06.12.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**<u>ಪಾಟೀ ಸವಾಲು :</u>** 5 ನೇ ಪ್ರತಿವಾದಿಯ ಪರ ವಕೀಲರಿಂದ :-

ಚಂದ್ರಪ್ಪ ನನ್ನ ಮಾವ. ಚಂದ್ರಪ್ಪನ ತಾಯಿಯ ಹೆಸರು ಗಂಗಮ್ಮ. ದಾವಾ ಆಸ್ತಿಯು ನನ್ನ ಮಾವನಿಗೆ ಅವರ ತಾಯಿಯಿಂದ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಪಿತ್ರಾರ್ಜಿತ ಆಸ್ತಿ ಅಲ್ಲ ಎಂದರೆ ಸಾಕ್ಷಿ ಸುಮ್ಮನಿರುತ್ತಾರೆ. ದಾವಾ ಅಸ್ತಿಯನ್ನು ನನ್ನ ಮಾವ ಮತ್ತು ಅವರ ಮಗಳು ಭಾಗ ಮಾಡಿಕೊಂಡಿರುತ್ತಾರೆಂದರೆ ಸಾಕ್ಷಿ ನನ್ನ ಮನೆಯವರನ್ನು ಬಿಟ್ಟು ಭಾಗ ಮಾಡಿಕೊಂಡಿರುತ್ತಾರೆಂದು ನುಡಿಯುತ್ತಾರೆ. 4 ನೇ ಪ್ರತಿವಾದಿ 5 ನೇ ಪ್ರತಿವಾದಿಗೆ ದಾವಾ ಆಸ್ತಿಯಲ್ಲಿ 2 ಎಕರೆ 2 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ನಮಗೆ ಗೊತ್ತಿಲ್ಲದ ಹಾಗೇ ಮಾರಾಟ ಮಾಡಿರುತ್ತಾರೆಂದು ನುಡಿಯುತ್ತಾರೆ. 5 ನೇ ಪ್ರತಿವಾದಿ ತುಂಬಾ ಹಣ ಖರ್ಚು ಮಾಡಿ ಸದರಿ ಜಮೀನಿನಲ್ಲಿ ತೋಟ ಮಾಡಿರುತ್ತಾರೆಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಉಳಿದ ಅರ್ಧ ಭಾಗ ಚಂದ್ರಪ್ಪನ ಹೆಸರಿನಲ್ಲಿ ಇರಬಹುದು.

ದಾವಾ ಆಸ್ತಿಯು ಚಂದ್ರಪ್ಪನಿಗೆ ಅವರ ತಾಯಿಯ ಕಡೆಯ ಆಸ್ತಿಯಾದ ಕಾರಣ ನನಗೆ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಗೆ ತೊಂದರೆ ನೀಡಲು ಈ ಸುಳ್ಳು ದಾವೆಯನ್ನು ಹಾಕಿರುತ್ತಾರೆಂದರೆ ಸರಿಯಲ್ಲ.

**ಮರು ವಿಚಾರಣೆ:** ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

(ಸಂತೋಷ ಕುಮಾರ್ ಪಿ. ಎಸ್.)
ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರ.ದ.ನ್ಯಾ.ದಂ.ರವರು,
ತರೀಕೆರೆ.